ದಿನಾಂಕಃ 01.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿ ಇದೆ. ಅದರಲ್ಲಿನ ರುಜು ನನ್ನ ರುಜುವಾಗಿದೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಸ್ವತ್ತು ಒಟ್ಟು 14 ಎಕರೆ 14 ಗುಂಟೆ ಇರುತ್ತದೆ. ಸರ್ವೆ ನಂಬರ್ 43 ರ ಚಕ್ಕು ಬಂದಿ ಪೂರ್ವಕ್ಕೆ ಸರ್ಕಾರಿ ಗೋಮಾಳ, ಪಶ್ಚಿಮಕ್ಕೆ ದೊಡ್ಡರಾಮಯ್ಯನವರ ಜಮೀನು, ಉತ್ತರಕ್ಕೆ ದೊಡ್ಡನಾಯಕನವರ ಜಮೀನು, ದಕ್ಕಿಣಕ್ಕೆ ಚೌಡಮ್ಮನವರ ಜಮೀನು ಇರುತ್ತದೆ. ಚೌಡಮ್ಮನವರ ಜಮೀನು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 43 ಯಾರ ಯಾರ ಹೆಸರಿಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿಯವರ ಸರ್ವೆ ನಂಬರ್ 43ರಲ್ಲಿ 7ಎಕರೆ ನಿವೇಶನಗಳನ್ನು ವಿಂಗಡಿಸಿದ್ದಾರೆ ಎಂದರೆ ಸಾಕ್ಷಿ ಪಕ್ಕದ ಜಮೀನಿನಲ್ಲಿ ಎಂದು ನುಡಿಯುತ್ತಾರೆ. ಸದರಿ ನಿವೇಶನಗಳಲ್ಲಿ ವಾದಿಯವರಿಗೂ ಸಹ ನೀಡಲಾಗಿದೆ ಎಂದರೆ ಸರಿಯಲ್ಲ. ವಾದಿಯವರಿಗೆ ಜಮೀನು ಮಂಜೂರಾದಾ ದಿನಾಂಕ ಗೊತ್ತಿಲ್ಲ ಪಂಚಾಯಿತಿ ಕಡೆಯಿಂದ ಮಂಜೂರಾಗಿರುತ್ತದೆ. ವಾದಿಯವರೊಂದಿಗೆ ಬೇರೆ ಯಾರಿಗೆ ನಿವೇಶನ ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಯವರಿಗೆ ಮಂಜೂರಾದ ನಿವೇಶನ ಅಳತೆ ಪೂರ್ವ ಪಶ್ಚಿಮ 21 ಅಡಿ ಉತ್ತರ ದಕ್ಷಿಣ 21 ಅಡಿ ಇರುತ್ತದೆ. ಸರ್ವೆ ನಂಬರ್ 43ರಲ್ಲಿ 1987ರಲ್ಲಿ ಅಂಚಿಕೆಯಾದ ನಿವೇಶನಗಳಲ್ಲಿ ವಾದಿಯವರು ಮನೆ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ದಿಃ20.04.2017ರಲ್ಲಿ ಜಿಲ್ಲಾಧಿಕಾರಿಯವರು ತಾಲ್ಲೂಕು ಪಂಚಾಯಿತಿಯವರಿಗೆ ನಿವೇಶನ ಮಂಜೂರು ಮಾಡುವ ಬಗ್ಗೆ 7 ಎಕರೆ ನೀಡಿಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ದಲ್ಲಿ ಇರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು

ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನದಲ್ಲಿ ಇಲ್ಲದಿದದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.